**ಸಾಕ್ಷಿಯನ್ನು ದಿಃ 07.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ಅಡಿ ಸಲ್ಲಿಸಿದ ಅರ್ಜಿ ಮೇಲಿನ ಆದೇಶದ ಮೇರೆಗೆ ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಎಲ್.ಕೆ ವಕೀಲರ ಪರವಾಗಿ ಶ್ರೀ ಡಿ.ವಿ.ಎಸ್ ವಕೀಲರಿಂದಃ-**

ದೂರು ಕೊಡುವ ಸಮಯದಲ್ಲಿ ಪಿರ್ಯಾದುದಾರರ ಜೊತೆ ಬೇರೆ ಯಾರು ಬಂದಿರಲಿಲ್ಲ, ಅವರೊಬ್ಬರೆ ಬಂದಿದ್ದರು. ಅವರು ತಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ಬಂದಿದ್ದರಾ ಎಂದು ನಾನು ವಿಚಾರಣೆ ಮಾಡಿಲ್ಲ. ಆ ರೀತಿ ವಿಚಾರಣೆ ಮಾಡಲು ನನಗೆ ಯಾವುದೆ ತೊಂದರೆ ಇರಲಿಲ್ಲ. ದೂರಿನ ಜೊತೆ ಬೇರೆ ಯಾವುದೆ ದಾಖಲೆಗಳನ್ನು ತಂದಿರಲಿಲ್ಲ. ದೂರಿನಲ್ಲಿ ಇರುವ ವಿಷಯಗಳನ್ನು ನೋಡಿದರೆ ಬ್ಯಾಂಕ್ ಒಳಗಿನ ಸಮಸ್ಯೆಗಳು ಇರುವುದು ಗೊತ್ತಾಗುತ್ತದೆ ಎಂದರೆ ನಾನು ನೋಡಿಲ್ಲ. ದೂರಿನ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಯಾರು ದೂರು ಕೊಟ್ಟಿಲ್ಲ. ಸದರಿ ದೂರನ್ನು ತೆಗೆದುಕೊಳ್ಳಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಸ್ವೀಕರಿಸಿದ್ದೇನೆ ಎಂದರೆ ಸರಿಯಲ್ಲ.

ಸ್ಥಳ ಮಹಜರ್ ಮಾಡುವ ಪೂರ್ವದಲ್ಲಿ ಪಂಚರಿಗೆ ನೊಟೀಸು ಕೊಟ್ಟಿಲ್ಲ, ಬಾಯಿ ಮಾತಿನ ಮೂಲಕ ಅವರನ್ನು ಬರಮಾಡಿಕೊಂಡಿದ್ದೇವು. ಹಾಗೆ ನೊಟೀಸು ಕೊಡಲು ಯಾವುದೆ ತೊಂದರೆ ಇರಲಿಲ್ಲ. ಪಂಚರನ್ನು ಸ್ಥಳ ಮಹಜರ್ ಮಾಡುವ ಸ್ಥಳದಲ್ಲಿಯೆ ಬರಮಾಡಿಕೊಳ್ಳಲಾಗಿತ್ತು. ಬ್ಯಾಂಕ್ ನವರು ಖಾಸಗಿ ದೂರನ್ನು ಸಲ್ಲಿಸಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರರಿಂದ ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಕೇಸ್ ಅನ್ನು ದಾಖಲಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ, ಠಾಣೆಯಲ್ಲಿ ತಯಾರಿಸಿಕೊಂಡು ಅದಕ್ಕೆ ಪಂಚರ ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.